ನೇಕಾರಿಕೆ ಕೇಂದ್ರಗಳಿಗೆ ಹೋಗುತ್ತಿದೆ. ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಕಚ್ಚ ರೇಷ್ಮೆಯು ರಾಷ್ಟ್ರದ ಆಂತರಿಕ ಜವಳಿ ಬೇಡಿಕೆಗೆ ಅದರಲ್ಲೂ ಮುಖ್ಯವಾಗಿ ಕೈಮಗ್ಗಗಳಲ್ಲಿ ಬಳಕೆಯಾಗುತ್ತದೆ. ಮಹಿಳೆಯರ ಉಡುಪು, ಸೀರೆಗಳ ತಯಾರಿಕೆಯಲ್ಲಿ ಹೆಚ್ಚಾಗಿ ಸ್ಥಳೀಯ ರೇಷ್ಮೆಯನ್ನು ಬಳಸಲಾಗುತ್ತಿದೆ. ವಿದ್ಯುತ್ ಮಗ್ಗಗಳ ಬಳಕೆಗೆ ಒಂದೇ ಗುಣಮಟ್ಟದ ಹೆಚ್ಚಿನ ಪ್ರಮಾಣದ ರೇಷ್ಮೆ ಬೇಕಾಗುವ ಕಾರಣ ಈ ವಲಯವು ಹೆಚ್ಚಾಗಿ ಆಮದು ರೇಷ್ಮೆ ಮೇಲೆ ಅವಲಂಬಿತವಾಗಿದೆ.

ವಿದ್ಯುತ್ ಮಗ್ಗಗಳ ಬೇಡಿಕೆಯಾದ ಒಂದೇ ಗುಣಮಟ್ಟದ ಹೆಚ್ಚಿನ ಪ್ರಮಾಣದ ರೇಷ್ಮೆ ಉತ್ಪಾದಿಸಲು ಖಾಸಗಿ ವಲಯದಲ್ಲಿ 400 ತುದಿಗಳ ಸ್ವಯಂ ಚಾಲಿತ ದೊಡ್ಡ ಪ್ರಮಾಣದ ಒಂದು ರೀಲಿಂಗ್ ಘಟಕವನ್ನು ರಾಮನಗರದಲ್ಲಿ ಸ್ಥಾಪಿಸಲಾಗಿದೆ. ಇದೇ ಮಾದರಿಯ ಇನ್ನೂ 2 ಘಟಕಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಗುತ್ತಿದೆ.

ಅನೇಕ ಫಲಾನುಭವಿ ಆಧಾರಿತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಭಾಗೀದಾರರನ್ನು ಪ್ರೋತ್ಸಾಹಿಸುವ ಮೂಲಕ ರಾಜ್ಯದಲ್ಲಿ ರೇಷ್ಮೆ ಉತ್ಪಾದನೆಯನ್ನು 2011–12ನೇ ಸಾಲಿಗೆ 8500 ಮೆ.ಟನ್‌ಗಳಿಗೆ ಏರಿಸುವ ಗುರಿ ಹಮ್ಮಿಕೊಳ್ಳಲಾಗಿದೆ.

ಇ) ರೇಷ್ಮೆ ಆಮದು ನೀತಿ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿದೆ. ರೇಷ್ಮೆ ಆಮದು ಮಾಡಿಕೊಳ್ಳುವುದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಅದನ್ನು ಸಹಕಾರಿ ಸಂಘಗಳ ಮೂಲಕ ವಿತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಬಂಡವಾಳ ಹೂಡಿಕೆ

55(368) ಶ್ರೀ ಹ್ಯಾರಿಸ್ (ಶಾಂತಿನಗರ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ವಿವಿಧ ಉದ್ದಿಮೆಗಳ ಮೂಲಕ ಹೂಡಿಕೆ ಮಾಡಲಾದ ಒಟ್ಟು ಔದ್ಯಮಿಕ ಬಂಡವಾಳದ ಮೊತ್ತ ಎಷ್ಟು; ಅದರಲ್ಲಿ ಕರ್ನಾಟಕ ರಾಜ್ಯ ಮೂಲ ಉದ್ದಿಮೆದಾರರ ಬಂಡವಾಳದ ಮೊತ್ತ ಎಷ್ಟು;

ಮೂಲತಃ ರಾಜ್ಯದ ಉದ್ದಿಮೆದಾರರುಗಳಿಗೆ ಪ್ರೋತ್ಸಾಹಕ ಸೌಲಭ್ಯಗಳೇನಾದರೂ ಒದಗಿಸಿ ಕೊಡಲಾಗುತ್ತಿದೆಯೇ;

ಆ) ರಾಜ್ಯದಲ್ಲಿ ಹಿಂದುಳಿದ ಜಿಲ್ಲೆಗಳ ಔದ್ಯಮಿಕ ಅಭಿವೃದ್ಧಿಗಾಗಿ ಉದ್ಯಮಗಳ ಸ್ಥಾಪನೆಗೆ ಕೈಗೊಂಡ ಕ್ರಮಗಳೇನು;

ಇ) ಈ ಅವಧಿಯಲ್ಲಿ ಸ್ಥಾಪಿಸಲಾದ ಉದ್ಯಮಗಳ ಮೂಲಕ ಒದಗಿಸಿಕೊಟ್ಟ ಉದ್ಯೋಗಗಳ ಸಂಖ್ಯೆ ಎಷ್ಟು?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಅನುಮೋದನೆಯಾದ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಹೂಡಬಹುದಾದ ಬಂಡವಾಳ ಮೊತ್ತ ರೂ.490178 ಕೋಟಿ. ಇವುಗಳಲ್ಲಿ ಒಟ್ಟು 201 ಉದ್ದಿಮೆಗಳು ಅನುಷ್ಠಾನದ ಹಂತದಲ್ಲಿದ್ದು ರೂ. 280893 ಕೋಟಿಗಳ ಬಂಡವಾಳ ಹೂಡಿಕೆಯಾಗಲಿದೆ. ಜೊತೆಗೆ 14 ಯೋಜನೆಗಳು ಈಗಾಗಲೇ ಅನುಷ್ಠಾನಗೊಂಡಿವೆ. ಕರ್ನಾಟಕ ಮೂಲದವರು ಎಷ್ಟು ಬಂಡವಾಳ ಹೂಡಿದಾರೆಂಬುದನ್ನು ಪ್ರತ್ಯೇಕಗೊಳಿಸುವುದು ಕಷ್ಟ.

ಮುಂದುವರೆದಂತೆ ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಅನುಷ್ಠಾನ ಗೊಂಡ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳ ಉದ್ಯಮಗಳ ಒಟ್ಟು ರೂ.2244 ಕೋಟಿ ಬಂಡವಾಳ ಹೂಡಿಕೆಯಾಗಿದೆ.

ರಾಜ್ಯದಲ್ಲಿ ಬಂಡವಾಳ ಹೂಡುವ ಕೈಗಾರಿಕಾ ಯೋಜನೆಗಳಿಗೆ ನೂತನ ಕೈಗಾರಿಕಾ ನೀತಿ 2009–14ರಂತೆ ಅನ್ವಯಿಸುವ ಪ್ರೋತ್ಸಾಹ ಹಾಗೂ ರಿಯಾಯಿತಿಗಳನ್ನು ನೀಡಲಾಗುತ್ತಿದೆ.

ಆ) 1) 2009–14ರ ಕೈಗಾರಿಕಾ ನೀತಿಯಲ್ಲಿ ಡಾ॥ ನಂಜುಂಡಪ್ಪ ವರದಿಯ ಆಧಾರದ ಮೇಲೆ ಎಲ್ಲಾ ತಾಲ್ಲೂಕುಗಳನ್ನು ಅತಿ ಹೆಚ್ಚು ಹಿಂದುಳಿದ, ಹೆಚ್ಚು ಹಿಂದುಳಿದ, ಹಿಂದುಳಿದ ಮತ್ತು ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು ಎಂದು ವರ್ಗೀಕರಣ ಮಾಡಲಾಗಿರುತ್ತದೆ.

2) ಅತಿ ಹೆಚ್ಚು ಹಿಂದುಳಿದ ಹಾಗೂ ಹೆಚ್ಚು ಹಿಂದುಳಿದ ತಾಲ್ಲೂಕುಗಳನ್ನೊಳಗೊಂಡಿರುವ ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚು ಉತ್ತೇಜನ ಹಾಗೂ ರಿಯಾಯಿತಿಗಳನ್ನು ನೀಡಲಾಗುತ್ತಿದೆ.

3) ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ಪೂರಕವಾಗುವಂತೆ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ವಿಶೇಷ ಪ್ರೋತ್ಸಾಹ ನೀಡಲಾಗುತ್ತಿದೆ.

ಇ) ಈ ಅವಧಿಯಲ್ಲಿ ಸುಮಾರು 2.2 ಲಕ್ಷ ಜನರಿಗೆ ಉದ್ಯೋಗಾವಕಾಶ ಒದಗಿಸಿದೆ.

ಅಸಂಘಟಿತ ವಲಯದ ಕಾರ್ಮಿಕರುಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳು

56(369) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) ಮಾನ್ಯ ಕಾರ್ಮಿಕ ಹಾಗೂ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸಂಘಟಿತ ವಲಯದ ಕಾರ್ಮಿಕರುಗಳಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳು ಯಾವುವು;

ಆ) ಅಸಂಘಟಿತ ವಲಯಗಳ ಕಾರ್ಮಿಕರಿಗೆ ಇ.ಎಸ್.ಐ. ಸೌಲಭ್ಯಗಳನ್ನು ಒದಗಿಸಿ ಕೊಡಲಾಗಿದೆಯೇ; ಹಾಗಿದ್ದಲ್ಲಿ, ಅವು ಯಾವುವು;

ಇ) ಅಸಂಘಟಿತ ವಲಯದ ಕಾರ್ಮಿಕರುಗಳಿಗೆ ಕೌಶಲ್ಯ ತರಬೇತಿ ಹಾಗೂ ಉದ್ಯೋಗ ಖಾತರಿ ಕುರಿತು ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಹಾಗೂ ರೇಷ್ಮೆ ಸಚಿವರು)

ಅ) ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008ರಡಿಯಲ್ಲಿ ರಾಜ್ಯ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ (ಕರ್ನಾಟಕ) ನಿಯಮಗಳು 2009ನ್ನು ರಚಿಸಿ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಿರುತ್ತದೆ.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಎನ್‌ಪಿಎಸ್ ಲೈಟ್-ಸ್ವಾವಲಂಬನ್ ಎಂಬ ಪಿಂಚಣಿ ಯೋಜನೆಯನ್ನು ಪ್ರಾರಂಭಿಕವಾಗಿ 1) ದರ್ಜಿ 2) ದೋಬಿ 3) ಹಮಾಲಯ 4) ಖಾಸಗಿ ಹೋಟೆಲ್ ಕಾರ್ಮಿಕರು 5) ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ ನಿರ್ವಾಹಕರು 6) ಆಟೋ ಮೊಬೈಲ್ ವರ್ಕ್‌ಶಾಪ್‌ಗಳಲ್ಲಿ ಕೆಲಸ ಮಾಡುವ ಅಸಂಘಟಿತ ಕಾರ್ಮಿಕರಿಗೆ